1445(758) ಶ್ರೀ ಕೃಷ್ಣ ಪಾಲೇಮಾರ್.ಜಿ(ಸುರತ್ಕಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಗಂಡು ಹೆಣ್ಣಿನ ಅನುಪಾತದಲ್ಲಿ ವ್ಯತ್ಯಾಸ ಕಂಡುಬರುತ್ತಿರುವುದು ನಿಜವೇ? ಹೌದಾದಲ್ಲಿ ಅದರ ಅನುಪಾತದ ವಿವರಗಳೇನು?

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು):

1) ರಾಜ್ಯದಲ್ಲಿ ಗಂಡು ಹೆಣ್ಣಿನ ಅನುಪಾತದಲ್ಲಿ ವ್ಯತ್ಯಾಸ ಕಂಡು ಬರತ್ತಿರುವುದು ನಿಜ. 2001 ರ ಜನಗಣತಿಯಂತೆ 1000 ಪುರುಷರಿಗೆ 964 ಮಹಿಳೆಯರಿರುತ್ತಾರೆ.

1446(1221) ಶ್ರೀ ಲಾಲಾಜಿ ಆರ್. ಮೆಂಡನ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ಯಾಂಕುಗಳಲ್ಲಿ ಸಾಲ ಮಾಡಿ ಉತ್ಪಾದನೆ ಇಲ್ಲದೆ ಆದಾಗ ಆತ್ಮಹತ್ಯೆಗೆ ಶರಣಾದವರ ಸಂಖ್ಯೆ ಎಷ್ಟು?

ಆ) ಆತ್ಮಹತ್ಯೆ ಮಾಡಿಕೊಂಡ ರೈತರ ನೆರವಿಗೆ ಸರ್ಕಾರ ನಿಗಧಿಪಡಿಸಲಾದ ಮೊತ್ತ ವೆಷ್ಟು?

ಇ) ಯಾವ ಮಾನದಂಡದ ಮೇಲೆ ವರ್ಗೀಕರಿಸಲಾಗಿದೆ?

ಈ) ಸರ್ಕಾರದ ನೆರವನ್ನು ಅದುವರೆವಿಗೂ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ದಿನಾಂಕ:1-4-2003 ರಿಂದ 28-1-2005 ರವರೆಗೆ ಬ್ಯಾಂಕುಗಳಲ್ಲಿ ಬೆಳೆ ಸಾಲ ಮಾಡಿ ಉತ್ಪಾದನೆ ಇಲ್ಲದೆ 294 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ರೈತರ ಆತ್ಮಹತ್ಯೆ ಪ್ರಕರಣಗಳನ್ನು ಪರಿಶೀಲಿಸುವ ಸಲುವಾಗಿ ರಚಿಸಿರುವ ಸಮಿತಿಯು ಸಮಿತಿಯು ಅರ್ಹ ಪ್ರಕರಣವೆಂದು ಪರಿಗಣಿಸಿದ ನಂತರ ಆತ್ಮಹತ್ಯೆಗೊಂಡ ರೈತರ ಕುಟುಂಬದವರಿಗೆ ರೂ.100 ಲಕ್ಷದಂತೆ ಪರಿಹಾರ ನೀಡಲಾಗುವುದು.

ಇ) ಸರ್ಕಾರಿ ಆದೇಶ ಸಂಖ್ಯೆ: ಕೃತೋಇ/280/ಕೃಉಇ/2003 ದಿನಾಂಕ:18/07/2003ರ ಮಾರ್ಗಸೂಚಿ ಪ್ರಕಾರ.

1) ಆತ್ಮಹತ್ಯೆಗೊಂಡ ರೈತನ ಹೆಸರಿನಲ್ಲಿ ಜಮೀನಿರಬೇಕು.
2) ಕೃಷಿಗಾಗಿ ಸಾಲ ಪಡೆದಿರಬೇಕು.
3) ಸರ್ಕಾರಿ ಅಧಿಕೃತ ಸಂಸ್ಥೆಗಳಿಂದ ಸಾಲ ಪಡೆದಿರಬೇಕು.
4) ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಆತ್ಮಹತ್ಯೆಗೆ ಕಾರಣವಾಗಿರಬೇಕು.

ಈ) ಸಮಿತಿಯು ತೀರ್ಮಾನಿಸಿದ 294 ಅರ್ಹ ಪ್ರಕರಣಗಳಲ್ಲಿ ಇಲ್ಲಿಯವರೆಗೆ 269 ಆತ್ಮಹತ್ಯೆಯಾದ ರೈತ ಕುಟುಂಬಗಳಿಗೆ ತಲಾ ರೂ.100 ಲಕ್ಷದಂತೆ ಒಟ್ಟು ರೂ.269.00 ಲಕ್ಷ ಪರಿಹಾರ ನೀಡಲಾಗಿದೆ. ಉಳಿತ 25 ಪ್ರಕರಣಗಳಿಗೆ ಸಧ್ಯದಲ್ಲಿಯೇ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.